<u>ಭಾರತದಲ್ಲಿ ಮಾನವ ಅಭಿವೃದ್ಧಿಯನ್ನು ಅರ್ಥೈಸುವುದು.</u>

ಅಮರಜಿತ್‌ಸಿನ್ಹಾ

1986–87 ರಾಷ್ಟ್ರೀಯ ಶಿಕ್ಷಣ ನೀತಿಯ ವರ್ಷ. ರಾಷ್ಟ್ರೀಯ ಮಾದರಿ ಸಮೀಕ್ಷೆಯ 42ನೇ ಸುತ್ತಿನ ವರ್ಷ. ಎನ್‌ಎಸ್‌ಎಸ್‌ಓ ಮಾಡಿದ್ದ ದೋಷಾರೋಪವನ್ನು ಧಿಕ್ಕರಿಸಲಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಶೇ. 69.23 ರಷ್ಟು ಹೆಣ್ಣುಮಕ್ಕಳ ಪೈಕಿ ಆರು ವರ್ಷಕ್ಕೆ ಮೇಲ್ಪಟ್ಟ ಮಕ್ಕಳು ಗ್ರಾಮೀಣ ಭಾರತದಲ್ಲಿ ಶಾಲೆಗಳಲ್ಲಿ ನಮೂದಾಗಲೇ ಇಲ್ಲ. ಅಷ್ಟೇ ಏನು? ಬಿಹಾರ ರಾಜ್ಯದಲ್ಲಿ ಪರಿಶಿಷ್ಟ ಬಾಲಕಿಯರು ಹಾಗೂ ಆಂಧ್ರಪ್ರದೇಶದಲ್ಲಿ ಪರಿಶಿಷ್ಟ ಪಂಗಡಗಳ ಬಾಲಕಿಯರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಶಾಲೆ ಬಿಟ್ಟವರ ಪ್ರಮಾಣ ಶೇ. 100 ರಷ್ಟಿತ್ತು!

ಸ್ಪಷ್ಟವಾಗಿ ಹೇಳುವುದಾದರೆ ಸ್ವತಂತ್ರ ಭಾರತದ. ಮೊದಲ ನಾಲ್ಕು ದಶಕಗಳು, ಗ್ರಾಮೀಣ ಪ್ರದೇಶದ ಮಕ್ಕಳನ್ನು, ಅದರಲ್ಲೂ ಹೆಣ್ಣು ಮಕ್ಕಳನ್ನು ಶಾಲೆಗೆ ಸೇರಿಸುವ ವಿಷಯದಲ್ಲಿ ವಿಫಲವಾಗಿರುವುದನ್ನು ಕಾಣಬಹುದು.

2014 ಎನ್‌ಎಸ್‌ಎಸ್‌ಓ 71ನೇ ಸುತ್ತು. ಈ ವರ್ಷ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ವಶಿಕ್ಷಣ ಅಭಿಯಾನವನ್ನು ಅನುಷ್ಠಾನಗೊಳಿಸಲಾದ 15 ವರ್ಷಗಳನ್ನು ಸೂಚಿಸುತ್ತದೆ. ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾಮಟ್ಟದವರೆಗೆ (ಗಿಖಖಖ ನೇ ತರಗತಿ) ಬಾಲಕರು ಮತ್ತು ಬಾಲಕಿಯರ ಒಟ್ಟಾರೆ ಹಾಜರಾತಿ ಪರಿಮಾಣದಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಶೇ. 99 ರಷ್ಟು ಮನೆಗಳಿಂದ ಎರಡು ಕಿ.ಮೀ. ಗಳ ವ್ಯಾಪ್ತಿಯಲ್ಲಿ ಇರುವ ಪ್ರಾಥಮಿಕ ಶಾಲೆಗಳಲ್ಲಿ ಮತ್ತು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶೇ. 86 ರಷ್ಟು ಮನೆಗಳಿಂದ ಎರಡು ಕಿ.ಮೀ. ನಷ್ಟು ವ್ಯಾಪ್ತಿಯಲ್ಲಿರುವ ಮಾಧ್ಯಮಿಕ (ಗಿಖಿಜಿ ಛಿಟಚಿಡಿಥಿ) ಶಾಲೆಗಳಲ್ಲಿ ಶೇ. 99 ರಷ್ಟು ಮಕ್ಕಳು ಶಾಲೆಗಳಿಗೆ ಸೇರಿದ್ದರು. ಸರ್ವಶಿಕ್ಷಣ ಅಭಿಯಾನವು ವಾಸ್ತವವಾಯಿತು. ಆದರೆ ಶಾಲೆಗಳಿಗೆ ಸೇರಿ ಹಾಜರಾಗುತ್ತಿದ್ದವರಲ್ಲಿ ಬಹುಪಾಲು ಮಕ್ಕಳು ಅವರ ಶಾಲಾ ಶಿಕ್ಷಣದ ಅವಧಿಗೆ ಅನುಗುಣವಾದ ರೀತಿಯಲ್ಲಿ ಕಲಿಯುವ ಹಾಗೂ ಬರೆಯುವ ಸಾಮರ್ಥ್ಯವನ್ನು ಪಡೆಯಲು ಸಾಧ್ಯವಾಗಿಲ್ಲದಿರುವುದು, ಗುಣಮಟ್ಟ ಹಾಗೂ ಕಲಿಕೆಯ ಸವಾಲು ಎದೆಗುಂದಿಸುತ್ತದೆ. ಇತ್ತೀಚಿಗೆ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತೆ ಕುರಿತು ಒತ್ತು ನೀಡಿದ ಮೇಲೆ ಸಮಾಜೋ–ಆರ್ಥಿಕ ಜನಗಣತಿ 2011 ರಲ್ಲಿ ಬಹುಸಂಖ್ಯೆಯ ಮನೆಗಳಲ್ಲಿ 25 ವರ್ಷಕ್ಕೂ ಮೇಲ್ಪಟ್ಟ ಯಾರೇ ಒಬ್ಬ ಸಾಕ್ಷರ ಸದಸ್ಯರಿರುವುದು ಕಂಡು ಬಂದಿದೆ. ಅದರಿಂದ ಸ್ವಲ್ಪ ಮಟ್ಟಿಗೆ ಸುಧಾರಣೆ ಕಂಡು ಬರುವುದಾದರೂ ಎಸ್‌ಇಸಿಸಿ ಗೆ ಅನುಸಾರವಾಗಿ ಪದವೀಧರರು ಹಾಗೂ ಪ್ರೌಢ ಶಿಕ್ಷಣದಲ್ಲಿ ಉತ್ತೀರ್ಣರಾದವರ ಸಂಖ್ಯೆ ಬಹಳ ಕಡಿಮೆಯಿರುವುದನ್ನು ಸೂಚಿಸುತ್ತದೆ.

ಕಳೆದ ಒಂದೂವರೆ ದಶಕದ ಅವಧಿ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಮಹತ್ತ್ವದ ಅವಧಿಯೆನ್ನಬಹುದು. ಸರ್ವಶಿಕ್ಷಣ ಅಭಿಯಾನದ (2001), ಜೊತೆಗೆ ಪ್ರಧಾನಮಂತ್ರಿಗಳ ಗ್ರಾಮೀಣ ರಸ್ತೆ ಯೋಜನೆಗೆ (ಪ್ರಮಗ್ರಾರಯೋ) ಸಾಕಷ್ಟು ಒತ್ತು ನೀಡಲಾಯಿತು. ಅಷ್ಟೇ ಅಲ್ಲದೆ, ರಾಷ್ಟ್ರೀಯ

ಗ್ರಾಮೀಣಾಭಿವೃದ್ಧಿ ಯೋಜನೆ (2005) ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಕಾರ್ಯಕ್ರಮ (2005 ರ ತರುವಾಯ) ಗಳನ್ನು ಇದರೊಂದಿಗೆ ಪ್ರಾರಂಭಿಸಲಾಯಿತು.

ಈ 15 ವರ್ಷಗಳ ಅವಧಿಯಲ್ಲಿ ಆರ್ಥಿಕ ಅಭಿವೃದ್ಧಿಯ ಏರಿಕೆಯೂ ಉಂಟಾಯಿತು. ತತ್ಫಲವಾಗಿ ನಗರಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳ ತಲಾವಾರು ವರಮಾನದಲ್ಲಿ ಕೂಡ ಏರಿಕೆಯಾಯಿತು. (ಪಿಸಿಇ 360 ಅಧ್ಯಯನ 2013–14) ಬಡಕುಟುಂಬಗಳ ತಲಾವಾರು ವರಮಾನದಲ್ಲಿ ಏರಿಕೆಯುಂಟಾಗುವುದರಿಂದ, ಶಾಲೆಗಳಲ್ಲಿ ಉತ್ತಮ ಹಾಜರಾತಿಗೆ ಹಾಗೂ ಆರೋಗ್ಯ ಸೇವೆಗಳನ್ನು ಪಡೆಯಲು ಅವಶ್ಯವಾಗುವ ವೆಚ್ಚಮಾಡಬಹುದಾದ ವರಮಾನವನ್ನು ಕುಟುಂಬಗಳು ಪಡೆಯಲು ನೆರವಾಗುತ್ತದೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಯೋಜನೆ ಅಡಿಯಲ್ಲಿ ಪ್ರಾಥಮಿಕ ಆರೋಗ್ಯ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವುದರ ಜೊತೆಗೆ ಪ್ರಾಥಮಿಕ ಶಾಲಾ ಶಿಕ್ಷಣ ಪಡೆಯುವ ಬಾಲಕಿಯರ ಸಂಖ್ಯೆ ಏರಿರುವುದು, ವರಮಾನಗಳಲ್ಲಿ ಏರಿಕೆಯುಂಟಾಗಿರುವುದು ಹಾಗೂ ಆಶಾ ಎಂದರೆ ಸಮುದಾಯ ಆರೋಗ್ಯ ಕಾರ್ಯಕರ್ತೆಯರ ಸಂಖ್ಯೆ ಹೆಚ್ಚಿಸಲು ಬೇಡಿಕೆಯುಂಟಾಗಿರುವುದು ಇವೆಲ್ಲವು ಆರೋಗ್ಯ ಮತ್ತು ಪೌಷ್ಟಿಕಾಂಶ ಸೂಚಕಗಳಲ್ಲಿ ವ್ಯಾಪಕ ಸುಧಾರಣೆಯಾಗಿರುವುದನ್ನು ತಿಳಿಸುತ್ತವೆ. ಕೆಲವರ್ಷಗಳ ಹಿಂದೆ (2003–05) ಶೇ. 60 ಕ್ಕೆ ಸ್ಥಗಿತಗೊಂಡಿದ್ದ ಶಿಶು ಮರಣ ಪ್ರಮಾಣವು 2013 ರಲ್ಲಿ ಶೇ. 40 ರಷ್ಟು ಇಳಿತಗೊಂಡಿದೆ. . ಶಕ್ತಿಯು ಪ್ರಮಾಣವು 2005 ರಲ್ಲಿದ್ದ 2.9 ರಿಂದ 2013 ರಲ್ಲಿ 2.3 ಕ್ಕೆ ಗಮನೀಯವಾಗಿ ಇಳಿದಿದೆ. ತೂಕ ಕಡಿಮೆಯಿರುವ ಮಕ್ಕಳ ಪ್ರಮಾಣವು 2004–05 ರಲ್ಲಿದ್ದ ಶೇ. 42.1 ರಿಂದ 2013–14 ರಲ್ಲಿ ಶೇ. 29.1 ರಷ್ಟು ಕಡಿಮೆಯಾಗಿದೆ. ಈ ಸುಧಾರಣೆಯು ಜಾಗತಿಕ ಮಟ್ಟದಲ್ಲಿ ಅಷ್ಟೇನು ಗಮನಾರ್ಹವಾಗಿಲ್ಲದಿದ್ದರೂ, ಕೆಲವೇ ವರ್ಷಗಳ ಹಿಂದೆ ನಮ್ಮಲ್ಲಿದ್ದ ಪರಿಸ್ಥಿತಿಗೆ ಹೋಲಿಸಿದಾಗ, ಇಂಥ ಇಳಿಕೆ ಪ್ರಮಾಣವು 1986–87 ರಲ್ಲಿ ಇದ್ದ ಪ್ರಾಥಮಿಕ ಶಿಕ್ಷಣದ ಅಥವಾ ಶತಮಾನ ಮುಗಿಯುವ ಅಂಚಿನಲ್ಲಿ ಇದ್ದ ಆರೋಗ್ಯದ ಗುಣಮಟ್ಟಕ್ಕೆ ಹೋಲಿಸಿದಾಗ ಅತ್ಯಂತ ಮಹತ್ತ್ವಪೂರ್ಣ ಸುಧಾರಣೆಯಾಗಿ ಪರಿಗಣಿಸಬಹುದಾಗಿದೆ ಎಸ್‌ಎಸ್‌ಎ ಯಿಂದ ಪ್ರಾಥಮಿಕ ಶಿಕ್ಷಣದ ಆರ್ಥಿಕ ವ್ಯವಸ್ಥೆಯಲ್ಲಿ ಸುಧಾರಣೆಗೊಂಡಿದ್ದರೂ, ಆರೋಗ್ಯ ವಿಷಯದಲ್ಲಿ ಸಾರ್ವಜನಿಕ ವೆಚ್ಚದ ಬಗ್ಗೆ ಹೇಳುವುದಾದರೆ ಎನ್‌ಆರ್‌ಹೆಚ್‌ಎಂ ಅಡಿಯಲ್ಲಿ ಆರ್ಥಿಕ ನೆರವು ದೊರಕಿದ್ದರೂ ಜಿಡಿಪಿಯಲ್ಲಿ ಅತ್ಯಂತ ಕಡಿಮೆ ಸುಧಾರಣೆಯೆಂದೇ ಹೇಳಬಹುದು. ಸ್ಪಷ್ಟವಾಗಿ ಹೇಳುವುದಾದರೆ, ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ಸಾರ್ವಜನಿಕ ವೆಚ್ಚದಲ್ಲಿ ಸುಧಾರಣಮಟ್ಟದ ಏರಿಕೆಯಾದರೂ ಕೂಡ ಶಾಲೆಗಳಲ್ಲಿ ಮತ್ತು ಆರೋಗ್ಯಸೂಚಕಗಳಲ್ಲಿ ಲಿಂಗ ಸಮಾನತೆ ಸುಧಾರಣೆಯಲ್ಲಿ ಮಹತ್ತ್ವದ ಪರಿಣಾಮಗಳುಂಟಾಗುತ್ತವೆ. ಆದರೆ ಗುಣಮಟ್ಟ ಸುಧಾರಣೆಯ ಸವಾಲುಗಳನ್ನು ಎದುರಿಸಲು, ಆಡಳಿತ ವೈಫಲ್ಯ ಮತ್ತು ಸಾಂಸ್ಥಿಕ ಅಭಿವೃದ್ಧಿಯ ಕೊರತೆ ನಿವಾರಣೆ ಹಾಗೂ ಬೋಧಕರು ಮತ್ತು ಆರೋಗ್ಯ ಕಾರ್ಯಕರ್ತರ ವೃತಿಪರ ಅಭಿವೃದ್ಧಿಯ ಮೇಲೆ ಇನ್ನೂ ಹೆಚ್ಚಿನ ಒತ್ತಡ ಹಾಕುವುದು ಅಗತ್ಯವಾಗುತ್ತದೆ.

ಕಳೆದ ಒಂದೂವರೆ ದಶಕ ಕೂಡ ಪಂಚಾಯತಿಯಲ್ಲಿ ಮಹಿಳಾ ಮೀಸಲಾತಿ ಕಲ್ಪಿಸುವ ಅವಧಿಯಾಗಿತ್ತೆನ್ನಬಹುದು. ನಿಧಾನವಾಗಿ ಆದರೆ ನಿಶ್ಚಿತವಾಗಿ ಹಲವಾರು ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಮಖ್ಯದ ಅಡಿಯಲ್ಲಿ ಅಥವಾ ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಕಮಿಷನ್

ಅಡಿಯಲ್ಲಿನ ಸ್ವಯಂಸೇವಾ ಗುಂಪುಗಳ ಅಡಿಯಲ್ಲಿ ಮಹಿಳಾ ಸಬಲೀಕರಣ ಕಂಡುಬರುತ್ತದೆ. ಈ ಅವಧಿಯಲ್ಲಿ ಮಹಿಳಾ ಸಾಕ್ಷರತೆ ಕೂಡ ತ್ವರಿತಗತಿಯಲ್ಲಿ ಮುಂದುವರಿಯಿತು. ಆದರೆ ಅಂತರ ಹೆಚ್ಚಾಗಿದ್ದರಿಂದ ಇನ್ನೂ ದೀರ್ಘವಾದ ಮಾರ್ಗ ಮುಂದಿದೆ. ಮಹಿಳಾ ಸರಪಂಚರು ತಮ್ಮ ತಂತಮ್ಮ ಗಂಡಂದಿರ ಮೇಲಿದ್ದ ಅವಲಂಬನೆಯನ್ನು ಸ್ವಲ್ಪ ಸ್ವಲ್ಪವಾಗಿ ಕಳಚಿಕೊಳ್ಳುತ್ತಿದ್ದಾರೆ . ಸಮಾಜದಲ್ಲಿ ಮಹಿಳೆಯರ ಪಾತ್ರಕ್ಕೆ ಸಂಬಂಧಿಸಿದಂತೆ, ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಸಾಮಾಜಿ ಪರಿರ್ತನೆಯಾಗುತ್ತಿದೆ.

ಜಾಗತಿಕ ಮಟ್ಟದ್ಲ ಮಾನವ ಅಭಿವೃದ್ಧಿಯಲ್ಲಿ ಭಾರತದ ಸ್ಥಾನವನ್ನು ಉತ್ತಮಪಡಿಸಲು ಏನು ಮಾಡಬೇಕು? ಈ ಪ್ರಕ್ರಿಯೆಯನ್ನು ಹೇಗೆ ತೀವ್ರಗೊಳಿಸಬಹುದು? ಭಾರತವೊಂದು ವೈವಿಧ್ಯಮಯ ರಾಷ್ಟ್ರವಾಗಿದ್ದು ಎಲ್ಲಾ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಹರಿಸಬೇಕಾದ ಹಲವಾರು ಆದ್ಯತೆಗಳಿರುವುದರಿಂದ, ಎಲ್ಲಾ ಪ್ರದೇಶಗಳಿಗೂ ಅನ್ವಯಿಸುವ ಯಾವುದೇ ಒಂದು ಸಾಮಾನ್ಯ ಪರಿಹಾರವನ್ನು ಸೂಚಿಸುವುದು ಕಷ್ಟವಾದರೂ, ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಗತ್ಯವಿರುವ ಕೆಲವೊಂದು ಸವಾಲುಗಳನ್ನು ಗುರುತಿಸಲು ಸಾಧ್ಯ. ಮೊದಲನೆಯದಾಗಿ, ವಿಶ್ವಾಸಾರ್ಹವಾದ ಸರ್ಕಾರಿ ವ್ಯವಸ್ಥೆಗಳಿಗೆ ಆದ್ಯತೆ ನೀಡುವುದೇ ಗುರಿಯಾಗಿರಬೇಕು. ಇದಕ್ಕೆ ಸರ್ಕಾರಿ ಹುದ್ದೆಗಳ ನೇಮಕಾತಿ ಮತ್ತು ಸರ್ಕಾರಿ ಆಡಳಿತ ನಿರ್ವಹಣೆಯಲ್ಲಿ ಸುಧಾರಣೆಗಳನ್ನು ತರುವುದು ಅವಶ್ಯವಾಗುತ್ತದೆ. ನಮಗೆ ಹೆಚ್ಚು ಮ್ಯಾಜಿಸ್ಟ್ರೇಟರುಗಳಿಗಿಂತ ಹೆಚ್ಚು ಸಂಖ್ಯೆಯ ಮ್ಯಾನೇಜರ್ (ವ್ಯವಸ್ಥಾಪಕರ) ಗಳ ಅಗತ್ಯವಿದೆ. ಸರ್ಕಾರಿ ವ್ಯವಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಕಿಂಚಿತ್ತು ಸಹಿಸಬಾರದು. ಶಾಲೆಗಳನ್ನು ಕೇವಲ ಚುನಾವಣಾ ಮತದಾನ ಕೇಂದ್ರ (ಬೂತ್) ಗಳೆಂದು ಮತ್ತು ಶಿಕ್ಷಕರು ಮತ್ತು ಆರೋಗ್ಯ ಕಾರ್ಯಕರ್ತರನ್ನು ಚುನಾವಣಾ ಏಜೆಂಟರೆಂದು ಭಾವಿಸಬಾರದು. ಆದರ್ಶ ಶಿಕ್ಷಕರನ್ನು ಮತ್ತು ಆರೋಗ್ಯ ಕಾರ್ಯಕರ್ತರನ್ನು ಆಯ್ಕೆ ಮಾಡುವಾಗ ಪಾರದರ್ಶಕ ವಿಧಾನಗಳನ್ನು ಬಳಸಬೇಕು. ವಾಸ್ತವವಾಗಿ, ದೂರದ ಗ್ರಾಮೀಣ ಪ್ರದೇಶಗಳಲ್ಲಿ ವೇತನ ಬಡ್ತಿ ನೀಡುತ್ತ ಶಿಕ್ಷಕ ಅಥವಾ ಆರೋಗ್ಯ ಕಾರ್ಯಕರ್ತರನ್ನು ಬೆಳೆಸುವ ಪರಿಸ್ಥಿತಿಯೂ ಇದೆ.

ಎರಡನೆಯದಾಗಿ, ಕೇವಲ ಮಾನವಾಭಿವೃದ್ಧಿಯೊಂದರಿಂದಲೇ ಕಿರಿಯ ವಿಭಾಗೀಕರಣ ಸಾಧ್ಯವಾಗುವುದಿಲ್ಲ. ಹೀಗಾಗಿ, ಸ್ವಯಂ ಸಹಾಯ ಗುಂಪುಗಳು ಮತ್ತು ಗ್ರಾಮೀಣ ಸಂಸ್ಥೆಗಳಂಥ ಬಡಜನರ ಸಂಸ್ಥೆಗಳ ಸಾಂಸ್ಥಿಕ ತೊಡಗಿಸಿಕೊಳ್ಳುವಿಕೆಯೊಂದಿಗೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಬೇಕಾಗುತ್ತದೆ. ಶಿಕ್ಷಣ, ಸಾಕ್ಷರತೆ, ಆರೋಗ್ಯ, ಕೌಶಲ್ಯಗಳು, ಜೀವನಾಧಿಕ ಉದ್ಯೋಗಗಳು, ನೈರ್ಮಲ್ಯ, ನೀರು, ಗೃಹ ನಿರ್ಮಾಣ, ಪೌಷ್ಠಿಕಾಹಾರ, ಹೊಲ ಮತ್ತು ಹೊಲರಹಿತ ಜೀವನಾಧಾರ ಉದ್ಯೋಗಗಳು, ಮಹಿಳಾ ಸಬಲತೆ, ಸಾಮಾಜಿಕ ನ್ಯಾಯ ಮುಂತಾದವುಗಳನ್ನು ನಿರಂತರ ಅಭಿವೃದ್ಧಿಗಾಗಿ ನಡೆಸುವ ಎಲ್ಲಾ ಪ್ರಯತ್ನಗಳ ಗುರಿಯೂ ಕೂಡ ಮಾನವ ವಿಕಾಸ ಮಿಷನ್–ಎಂದರೆ ಮಾನವನ ಏಳಿಗೆಗಾಗಿ ಮಾಡಲಾಗುವ ಸಾಮಾನ್ಯ ಕ್ರಮದ ಭಾಗವಾಗಿರಬೇಕು.

ಮೂರನೆಯದಾಗಿ, ಜನರ ಉತ್ತಮ ಜೀವನಕ್ಕಾಗಿ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳಿಂದ ಸಾಕಷ್ಟು ಆರ್ಥಿಕ ನೆರವು ಒದಗಿಸುವ ನಿಟ್ಟಿನಲ್ಲಿ ಕಾಲಮಿತಿಯ ಬದ್ಧತೆಯಿರಬೇಕು.

ಹಣವೊದಗಿಸುವುದು ಪರಿಣಾಮಕಾರಿಯಾಗಿ ಮತ್ತು ಸಕ್ಷಮವಾಗಿರಬೇಕಾದರೆ ಸಕಾಲಿಕವಾಗಿಯೇ ಇರತಕ್ಕದ್ದು, ಆರೋಗ್ಯ ಮತ್ತು ಶಿಕ್ಷಣ ವಲಯಗಳಿಗೆ ಸರಿದೂಗುವಂಥ ಉತ್ತಮ ಕಾರ್ಯನಿರ್ವಹಣಾ ವ್ಯವಸ್ಥೆಯಿರುವುದು ಅತ್ಯಾವಶ್ಯಕ. ಸಾರ್ವಜನಿಕ ಆರೋಗ್ಯ ಸಮಸ್ಯೆಗಳಿಗೆ ಸಾಂಸ್ಥಿಕ ಬೆಂಬಲ ಮತ್ತು ರಕ್ಷಣೆಯ ಸಾರ್ವಜನಿಕ ವ್ಯವಸ್ಥೆಯಿರುವುದು ಕೂಡ ಅತ್ಯಗತ್ಯ.

ನಾಲ್ಕನೆಯದಾಗಿ, ಚುನಾಯಿತ ಪ್ರತಿನಿಧಿಗಳ ನಡುವೆ ಉತ್ತರದಾಯಿತ್ವವು ಮಹಿಳೆಯರ ಸ್ವಸಹಾಯಗುಂಪುಗಳಿಂದ ಸಮುದಾಯ ಸಂಸ್ಥೆಗಳಿಗೆ ಸರಿದೂಗುವ ಸಾಂಸ್ಥಿಕ ಪಾತ್ರಗಳ ಮೂಲಕ ಬರಬೇಕಾಗುತ್ತದೆ. ಇದರಿಂದ ಚುನಾಯಿತ ಸರಪಂಚರು ಚಲಾಯಿಸುವ ಏಕಮೇವಾಧಿಕಾರವನ್ನು ಕೂಡ ಪ್ರಶ್ನಿಸುವಂಥ ಎಸ್‌ಎಚ್‌ಜಿಗಳು/ವಿಓ ಗಳಂಥ ಬಡಜನರ ಸಂಸ್ಥೆಗಳ ಪರಿಣಾಮದ ಪ್ರತಿಬಲವನ್ನು ಸೃಜಿಸಬಹುದಾಗಿರುತ್ತದೆ.

ಐದನೆಯದಾಗಿ, ಯಾವುದೇ ಸಾರ್ವಜನಿಕಸೇವೆಗಳಿಗೆ ಜನತೆ ಹಾಗೂ ವೃತ್ತಿಪರವ್ಯಕ್ತಿಗಳೊಂದಿಗೆ ಪಾಲುದಾರಿಕೆಯಿರುವುದು ಅವಶ್ಯವಾಗಿರುತ್ತದೆ. ಮಾಹಿತಿ ತಂತ್ರಜ್ಞಾನದ ಬಳಕೆಯಿಂದ ಉತ್ತರದಾಯತ್ವ ಹಾಗೂ ಪಾರದರ್ಶಕತೆಗೆ ಅಪೂರ್ವ ಅವಕಾಶವುಂಟಾಗುತ್ತದೆ. ಖಾಸಗಿವಲಯವು ಶಾಲೆಗಳು, ಆರೋಗ್ಯ ಸೌಕರ್ಯಗಳು, ಕೌಶಲ್ಯಪ್ರಾರಂಭಿಕಗಳು, ಹೊಲ ಮತ್ತು ಹೊಲವಿಲ್ಲದ ಜೀವನಾಧಾರ ಉದ್ಯೋಗಗಳ ಪ್ರಯತ್ನಗಳಿಗೆ ಸಾರ್ವಜನಿಕ ವ್ಯವಸ್ಥೆಗಳೊಂದಿಗೆ ವಾಸ್ತವವಾಗಿ ತೊಡಗಿಸಿಕೊಳ್ಳುವ ಮೂಲಕ ಉತ್ತಮ ಫಲಿತಾಂಶಗಳನ್ನು ಎದುರು ನೋಡಬಹುದು.

ಆರನೆಯದಾಗಿ, ಮಾನವ ಅಭಿವೃದ್ಧಿ ಕಾರ್ಯಕ್ರಮಗಳ ನಿರ್ವಹಣೆಗಾಗಿ ಇರುವ ಸರ್ಕಾರೀ ಸೇವೆಗಳನ್ನು ಹೊಸ ಕೌಶಲ್ಯ ಜೋಡಣೆಗಳ ಮೂಲಕ ಸಾಕಷ್ಟು ಬಲಪಡಿಸಬೇಕಾಗಿದೆ. ಮಾನವ ಅಭಿವೃದ್ಧಿಗಾಗಿ ಇರುವ ಸರ್ಕಾರಿ ಆಡಳಿತ ನಿರ್ವಹಣೆಯ ಸುಧಾರಣೆಗಳಿಗೆ ಅಭಿವೃದ್ಧಿ ಮತ್ತು ನಿಯಂತ್ರಣಕ್ಕಾಗಿ ಸಂಸ್ಥೆಗಳನ್ನು ಪರಿಶೀಲಿಸುವ ಅವಶ್ಯಕತೆಯಿದೆ. ನಾವು ಶಿಕ್ಷಕರು ಮತ್ತು ಆರೋಗ್ಯಕಾರ್ಯಕರ್ತರರನ್ನು ಇನ್ನಷ್ಟು ಉತ್ತಮಗೊಳಿಸಬೇಕಾಗಿದೆ ಹಾಗೂ ಅವರ ಕೌಶಲ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗುವಂತೆ ಬೆಳೆಸಬೇಕಾಗಿದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಮತ್ತು ಆರೋಗ್ಯಕಾರ್ಯಕರ್ತರು/ದಾದಿಯರು ಕೌಶಲ್ಯಾಭಿವೃದ್ಧಿಸಂಸ್ಥೆಗಳು ಉತ್ತಮ ಗುಣಮಟ್ಟದ ಕಲಿಕಾ ಕೌಶಲ್ಯಗಳನ್ನು ಒದಗಿಸುವ ಶ್ರೇಷ್ಠಕೇಂದ್ರಗಳಾಗಬೇಕು. ಉತ್ತಮ ಶಿಕ್ಷಕರು ಮತ್ತು ಆರೋಗ್ಯ ಕಾರ್ಯಕರ್ತರನ್ನಾಗಿ ಉತ್ತಮ ಸಾಂಸ್ಥಿಕ ಸಾಮರ್ಥ್ಯವನ್ನು ಸೃಜಿಸುವುದರಿಂದ ಕೇವಲ ನಮ್ಮ ದೇಶೀಯ ಅವಶ್ಯಕತೆಗಳನ್ನು ಪೂರೈಸುವುದು ಮಾತ್ರವಲ್ಲದೆ ಅಂಥ ಕೆಲಸಗಾರರಿಗಾಗಿ ಕೊನೆಗಾಣದ ಜಾಗತಿಕ ಅವಶ್ಯಕತೆಗಳನ್ನು ಕೂಡ ತಣಿಸಲು ನೆರವಾಗುತ್ತದೆ. ಮಾಹಿತಿ ತಂತ್ರಜ್ಞಾನ ಹಾಗೂ ಅಂತರ್ಜಾಲದ ಪಾತ್ರವೇನೇ ಇದ್ದರೂ ಶಿಕ್ಷಣ ಹಾಗೂ ಆರೋಗ್ಯ ಕಾರ್ಯಕರ್ತರಿಗೆ ಅಮಿತ ಜಾಗತಿಕ ಬೇಡಿಕೆಯಿದೆ. ಈ ಎರಡು ಸಂಸ್ಥೆಗಳಿಗೆ (ಶಿಕ್ಷಕರ ತರಬೇತಿ ಮತ್ತು ಆರೋಗ್ಯ ಕಾರ್ಯಕರ್ತರು/ದಾದಿಯರು) ಒತ್ತು ನೀಡುವುದು ನಮ್ಮ ಜಾಗತಿಕ ಔನ್ನತ್ಯದ ದಾರಿಯಲ್ಲಿ ಹೆಚ್ಚು ಕೇಂದ್ರೀಕೃತವಾಗಬೇಕು.

ಏಳನೆಯದಾಗಿ, ಮೇಲೆ ನಾವು ಸೂಚಿಸಿದ ಎಲ್ಲಾ ಅಂಶಗಳನ್ನು ನಿರ್ವಹಿಸಲು ಸಾಧ್ಯವಾಗಬೇಕಾದರೆ ಅತ್ಯುನ್ನತ ಮಟ್ಟದ ಆರ್ಥಿಕ ಅಭಿವೃದ್ಧಿಯಾಗಬೇಕೆಂಬುದನ್ನು

ಖಚಿತಪಡಿಸಿಕೊಳ್ಳುವ ಅವಶ್ಯಕತೆಯಿರುವುದನ್ನು ಹೇಳಬೇಕಾಗಿಯೇ ಇಲ್ಲ. ಕೌಟುಂಬಿಕ ವರಮಾನಗಳಲ್ಲಿ ಏರಿಕೆಯಾಗುವುದರಿಂದ ಅವರು ಶಾಲಾ ಪ್ರವೇಶದ ಪ್ರಕ್ರಿಯೆ ಹಾಗೂ ಆರೋಗ್ಯ ರಕ್ಷಣೆ ಸೇವೆಗಳನ್ನು ಬಳಸಿಕೊಳ್ಳಲು ಪಾಲ್ಗೊಳ್ಳುವುದರಲ್ಲಿ ತುಂಬಾ ಸುಧಾರಣೆಯಾಗುತ್ತದೆ.

ಪ್ರೌಢಶಿಕ್ಷಣ – ಸವಾಲನ್ನು ಎದುರಿಸುವುದು.

ಮಾಧ್ಯಮಿಕ–ಪ್ರೌಢಮಾಧ್ಯಮಿಕ ಶಾಲೆ ಅಭ್ಯಾಸವು ಪೂರ್ಣಗೊಂಡ ತರುವಾಯ ಪ್ರೌಢಶಿಕ್ಷಣಕ್ಕೆ ಭಾರಿಸಂಖ್ಯೆಯಲ್ಲಿ ಸೇರಿಸುವುದು ಕೂಡ ಒಂದು ಪ್ರಕಾರ್ಯವಾಗಿದೆ. ಅಲ್ಲದೆ ದಾರಿದ್ರ್ಯತನದಿಂದ ಹೊರಬರಲು ಸೆಣಸುತ್ತಿರುವ ಕುಟುಂಬಗಳಿಗೆ ಅದೊಂದು ಆಕಾಂಕ್ಷೆಯೂ ಆಗಿರುತ್ತದೆ. ಕನಿಷ್ಠಪಕ್ಷ ಸೈದ್ಧಾಂತಿವಾಗಿಯೂ, ಆಕಸ್ಮಿಕ ಹುಟ್ಟಿನ ಕಾರಣದಿಂದಾಗಿ ಕಲಿಕೆಗೆ ಅವಕಾಶನೀಡುವಂತಿಲ್ಲ ಎಂಬುದನ್ನು ಅಲ್ಲಗಳೆದಿರುವ ನಮ್ಮ ಪ್ರಜಾಪ್ರಭುತ್ವದಲ್ಲಿ ಅತಿ ಬಡತನದ ಕುಟುಂಬಗಳ ಕಲಿಕೆಯ ಆಕಾಂಕ್ಷೆಗಳಿಗೆ ಕೂಡ ಒತ್ತು ನೀಡಲಾಗಿದೆ! ಪ್ರೌಢಶಿಕ್ಷಣಕ್ಕೆ ಸೇರುತ್ತಿರುವ ಒಟ್ಟಾರೆ ಮಕ್ಕಳ ಸಂಖ್ಯೆ ಭಾರತದಲ್ಲಿನ ಲಿಂಗ ಹಾಗೂ ಸಾಮಾಜಿಕ ಅಸಮಾನತೆಗಳ ಅಂತರಗಳ ಚಿತ್ರಣ ನೀಡುತ್ತದೆ.. ಅವಕಾಶವಂಚಿತರಿಗಾಗಿ ತಾರತಮ್ಯ ನಿವಾರಣೆ ಮತ್ತು ದೃಢವಾದ

ಕ್ರಮಗಳನ್ನು ತೆಗೆದುಕೊಳ್ಳಲು ಎಲ್ಲಾ ಉಪಕ್ರಮಗಳನ್ನು ಕೈಗೊಂಡಿದ್ದರೂ ಕೂಡ ಮಹಿಳೆಯರು, ಬುಡಕಟ್ಟುಜನರು, ದಲಿತರ ಸಂಖ್ಯೆ ಪ್ರೌಢಶಿಕ್ಷಣ ಪಡೆಯುತ್ತಿರುವ ಇತರ ಅನುಕೂಲವಂತ ವರ್ಗದವರಿಗಿಂತ ಹಿಂದುಳಿದಿರುವುದು ಮುಂದುವರೆಯುತ್ತಲೇ ಇದೆ.

ಗುಣಮಟ್ಟದ ಪ್ರಶ್ನೆಯು ಪ್ರೌಢಶಿಕ್ಷಣಕ್ಕೆ ಎದುರಾಗುವ ಏಕೈಕ ಸವಾಲೆನಿಸಿದೆ, ಏಕೆಂದರೆ, ವಿದ್ಯಾವಂತರಾಗಿಯೂಉದ್ಯೋಗ ಪಡೆಯಲಾರದಂತ ಸನ್ನಿವೇಶವು ಪ್ರೌಢಶಿಕ್ಷಣ ಪಡೆಯುವವರ ಒಟ್ಟಾರೆ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವಬಗ್ಗೆ ಸವಾಲೊಡ್ಡುತ್ತದೆ. ಿ. ಕಳೆದ ಕೆಲವು ದಶಕಗಳಿಂದ ಖಾಸಗಿ ವಲಯದಲ್ಲಿ ಅತ್ಯಂತ ಮಹತ್ತ್ವದ ವಿಸ್ತರಣೆಯಾಗಿರುವುದರಿಂದ, ಸಾಧ್ಯತೆಯಿರುವವರಿಗೆ ವಿಶೇಷವಾಗಿ ಉದ್ಯೋಗಾವಕಾಶಗಳು ಹೆಚ್ಚಾಗುತ್ತಿವೆ. ಆದಾಗ್ಯೂ, ಸರ್ಕಾರದಿಂದ ಧನಸಹಾಯ ಪಡೆಯುವ ಸಂಸ್ಥೆಗಳಂತೆಯೇ ಗುಣಮಟ್ಟ, ಸಮಾನತೆ ಹಾಗೂ ಉದ್ಯೋಗಕ್ಕೆ ಸಂಬಂಧ ಪಟ್ಟಂತ ಸವಾಲುಗಳುಈ ಸಂಸ್ಥೆಗಳಿಗೂ ಕೂಡ ಅನ್ವಯಿಸುತ್ತವೆ.

ಭಾರತವು ಶೇ. 20 ರಷ್ಟು ಜಿಇಆರ್ ನ್ನು ದಾಟುವುದರೊಂದಿಗೆ ಪ್ರೌಢಶಿಕ್ಷಣದ “ದೊಡ್ಡ ಪ್ರಮಾಣದಲ್ಲಿ ಸಾಮೂಹೀಕರಿಸುವ” ಹಂತವನ್ನು ಪ್ರವೇಶಿಸಿರುವುದರಿಂದ ಕೆಲವೊಂದು ಕಾರ್ಯನೀತಿ ಅಂಶಗಳನ್ನು ಸ್ಪಷ್ಟೀಕರಿಸುವುದು ಅವಶ್ಯವಾಗಿದೆ. ಮೊದಲನೆಯದಾಗಿ. ಪ್ರೌಢಶಿಕ್ಷಣ, ಕೌಶಲ್ಯ, ಉದ್ಯೋಗಾವಕಾಶದ ಸಂಪರ್ಕಗಳ ಬಗ್ಗೆ ಯುಕ್ತವಾಗಿ ಅರ್ಥಮಾಡಿಕೊಳ್ಳುವ ಅವಶ್ಯಕತೆಯಿದ್ದು ಮುಂದಿನ ವಿಸ್ತರಣೆ ಮತ್ತು ಸುಧಾರಣೆಹಂತದಲ್ಲಿ ಕೌಶಲ್ಯದ ಬಗ್ಗೆ ಆಲೋಚಿಸಬಹುದು. ವಿಶ್ವದಾದ್ಯಂತ ದೊಡ್ಡಪ್ರಮಾಣದಲ್ಲಿ ಸಾಮೂಹೀಕರಿಸುವ ಹಂತದಲ್ಲಿ ಕೌಶಲ್ಯದ ಸವಾಲುಗಳ ಬಗ್ಗೆ ಹೆಚ್ಚು ಲಕ್ಷ್ಯ ನೀಡಲಾಗುತ್ತಿದೆ. ಹೀಗಾಗಿ ಪ್ರೌಢಶಿಕ್ಷಣ ಕ್ರಮದ ಒಂದು ಭಾಗವಾಗಿ ಕೌಶಲ್ಯಕ್ಕಾಗಿ, ಸೂಕ್ತವಾಗಿ ವಿವರಿಸಲಾದ ಯಶಸ್ಸಿನ ಚೌಕಟ್ಟನ್ನು ರೂಪಿಸುವುದು ಅಗತ್ಯವಾಗುತ್ತದೆ. ಎರಡನೆಯದಾಗಿ, ಪ್ರೌಢಶಿಕ್ಷಣದಲ್ಲಿ ವಿದ್ಯಾರ್ಥಿಗಳ ಆಯ್ಕೆಯ ಪ್ರಶ್ನೆಗಳನ್ನು ಕೂಡ ಪರಿಹರಿಸಬೇಕಾಗುತ್ತದೆ. ಎಂದರೆ ಆಯ್ಕೆ ಆಧಾರಿತ ಯಶಸ್ಸಿನ ಚೌಕಟ್ಟಿಗೆ ಶಿಕ್ಷಕರ ಚಾಲನಾಶಕ್ತಿಯ

ಆಂದೋಲನ ಅಗತ್ಯವಾದೀತು. ಶಿಕ್ಷಕರ ಚಾಲನಾಶಕ್ತಿಯೆಂದಾಗ ಬೋಧನಾ ವಿಷಯಗಳಲ್ಲಿನ ಕಾಳಜಿಗಳ ಬಗ್ಗೆ ಸಮಾಲೋಚನೆ ನಡೆಸಬಹುದು ಮತ್ತು ಸಾಂಸ್ಥಿಕ ಹಂತದಲ್ಲಿ ಚರ್ಚೆ ನಡೆಸಲು ಸಾಧ್ಯವಾಗುತ್ತದೆ ಹಾಗೂ ಎದುರಾಗುವ ಅವಶ್ಯಕತೆಗಳ ಬಗ್ಗೆ ಬೋಧಕವೃಂದ ಸಭೆ ನಡೆಸಬೇಕಾಗುತ್ತದೆ. ಮಾತ್ರವಲ್ಲ ಒಂದು ಅಂಗೀಕೃತ ಚೌಕಟ್ಟಿನ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಪಾಲ್ಗೊಳ್ಳುವ ತತ್ವವಾಗಿ ನಮ್ಯತೆಯನ್ನು ಒಪ್ಪಿಕೊಳ್ಳುವಂತೆ ಆಗುತ್ತದೆ. ಆಯ್ಕೆ ಆಧಾರಿತ ಯಶಸ್ಸಿನ ಚೌಕಟ್ಟನ್ನು ಬೋಧಕವೃಂದದವರೇ ಸಿದ್ಧಪಡಿಸಬೇಕಾಗಿದ್ದು, ವೈವಿಧ್ಯತೆಯೇ ಶಕ್ತಿಯಾಗಿರುವ ವಾಸ್ತವ ಸನ್ನಿವೇಶದಲ್ಲಿ ಅದು ಏಕತೆಗಾಗಿ ನೀಡುವ ಸೂಚನಾ ಚೀಟಿಯಾಗಬಾರದು ಮೂರನೆಯದಾಗಿ, ವಿಸ್ತರಣೆಯು ಪ್ರೌಢಶಿಕ್ಷಣದ ಬಗ್ಗೆ ಒಂದು ಬಗೆಯ **ಉತ್ಕೃಷ್ಟತಾ ಮನೋಭಾವದ**? ಅಂಶವೂ ಇರುವ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಹೊಸ ಸಂಸ್ಥೆಗಳನ್ನು ಹುಟ್ಟುಹಾಕಲು ಪ್ರಯತ್ನಿಸುವುದಕ್ಕೆ ಬದಲಾಗಿ ಅದಾಗಲೇ ಅಸ್ತಿತ್ವದಲ್ಲಿರುವ ಹಲವಾರು ಸಾರ್ವತ್ರಿಕ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ ಆದ್ಯತೆ ನೀಡಬೇಕು. ಒಂದು ಸಂಸ್ಥೆ ಬೆಳೆದು ನಿಲ್ಲಲು ಹಲವಾರು ದಶಕಗಳು ಅವಶ್ಯವಾಗುತ್ತದೆ. ಈ ವಿಷಯದಲ್ಲಿ ಚೀನಾದ 985 ಯೋಜನೆಯಲ್ಲಿ 39 ವಿಶ್ವವಿದ್ಯಾಲಯಗಳಿಗೆ ಆರ್ಥಿಕ ನೆರವು ಹಾಗೂ ನಮನಶೀಲತೆಯನ್ನು ನೀಡಿ ವಿಶ್ವಮಟ್ಟಕ್ಕೇರುವಂತೆ ಮಾಡಿದ್ದು ಮೇಲ್ಪಂಕ್ತಿಗೇರಲು ಕಲಿಯುವ ಒಂದು ಪಾಠವಾದೀತು.

ನಾಯಕತ್ವದ ಗುಣಮಟ್ಟವು ಪ್ರೌಢಶಿಕ್ಷಣ ಸಂಸ್ಥೆಯ ಉನ್ನತಿಗೆ ಅಥವಾ ದುಃಸ್ಥಿತಿಗೆ ಕಾರಣವಾಗಬಲ್ಲದು. ಪ್ರೌಢಶಿಕ್ಷಣ ಸಂಸ್ಥೆಗಳ ನಾಯಕರಿಗಾಗಿ ಕಠಿಣವಾದ ಶೋಧನೆ ಹಾಗೂ ಆಯ್ಕೆ ನಡೆಸುವುದರಿಂದ ಎಂದೂ ಹಿಂದೆ ಸರಿಯಲಾಗದು. ಜವಾಬ್ದಾರಿಯುತ ಸ್ವಾಯತ್ತತೆಯೊಂದಿಗೆ ವೃತ್ತಿಪರತೆ ಮತ್ತು ಶೈಕ್ಷಣಿಕ ವೃಂದವಿರುವ ವಿಶ್ವವಿದ್ಯಾಲಯದ ನಾಯಕರ ಆಯ್ಕೆಯಿಂದ ಸಮಾನತೆಗೂಡಿದ ಶ್ರೇಷ್ಠತೆಯನ್ನು ಸಾಧಿಸಬಹುದು.

ಗುಣಮಟ್ಟದ ಪ್ರಶ್ನೆಗೆ ನಿರಂತರ ಶ್ರೇಷ್ಠ ಸಿದ್ಧತೆಯ ಮುಂದರಿಕೆ, ಗುಣಮಟ್ಟದ ಆಶ್ವಾಸನೆ ಮತ್ತು ನಿಬಂಧನೆ ಆಧಾರಿತ ಚೌಕಟ್ಟನ್ನು ಹೊಂದಿರುವ ಅಗತ್ಯತೆಯಿರುತ್ತದೆ. ಸುಪರಿಭಾಷಿತ ಮೇಲ್ಪಂಕ್ತೀಕರಿಸುವ ಪ್ರಕ್ರಿಯೆಯ ಮೂಲಕ ರೂಪಿಸಲಾದ ನಿಯಮಗಳಿಗೆ ಗುಣಮಟ್ಟದ ಪುರಾವೆ ಮತ್ತು ಶ್ರೇಷ್ಠತೆಯ ಆಧಾರವಿಲ್ಲದಿದ್ದರೆ 'ಏಕನಿಲುವು' ನಿಯಮ ಪದ್ಧತಿಯು ಏಕಪಕ್ಷೀಯ ಹಾಗೂ ಅನೂಹ್ಯವಾದುದಾಗುತ್ತದೆ. ಸಾರ್ವತ್ರಿಕ ಹಾಗೂ ಖಾಸಗಿ ಸಂಸ್ಥೆಗಳಿಗೆ ಕನಿಷ್ಠ ಗುಣಮಟ್ಟವನ್ನು ನಿಗದಿಪಡಿಸುವಾಗ ಕೂಡ ಇದೇ ಮಾನದಂಡಗಳನ್ನು ಅನ್ವಯಿಸಬೇಕಾಗುತ್ತದೆ. ನ್ಯಾಯಯುತ ನಿಬಂಧನೆಗಳ ಸಂದಿಗ್ಧತೆಯನ್ನು ನಿವಾರಿಸಲು ವಸ್ತುನಿಷ್ಠಮೇಲ್ಪಂಕ್ತಿಗೇರಿಸುವ ಪ್ರಕ್ರಿಯೆಗಳನ್ನು ಆಧರಿಸಿದ ಕನಿಷ್ಠ ಗುಣಮಟ್ಟಗಳನ್ನು ನಿಗದಿಪಡಿಸುವುದು ಅತ್ಯುತ್ತಮ ವಿಧಾನವಾಗುತ್ತದೆ.

ಪ್ರೌಢಶಿಕ್ಷಣದಲ್ಲಿ ಪ್ರಯೋಗಶೀಲತೆ ಹಾಗೂ ನವೋನ್ವೇಷಣೆಯನ್ನು ತರಲು ಮುಕ್ತಾವಕಾಶದ ಅಗತ್ಯವಿದೆ. ವಿಶ್ವವಿದ್ಯಾಲಯಗಳಿಗೆ ಅವರು ಏನು ಬೋಧಿಸಬೇಕು ಮತ್ತು ತಮ್ಮ ಪಠ್ಯಕ್ರಮ ಮತ್ತು ಪಠ್ಯಕೋರ್ಸ್‌ಗಳ ಹೇಗೆ ಯೋಜಿಸಬೇಕು ಎಂಬ ಬಗ್ಗೆ ಚೌಕಟ್ಟು ತಯಾರಿಸಲು ಮುಕ್ತ ಸ್ವಾತಂತ್ರ್ಯವಿರಬೇಕು. ಪಠ್ಯದ ಕೋರ್ಸ್‌ಗಳಿಗೆ ಹೆಚ್ಚಿನ ಸತ್ವಸೇರಿಸಲು ಬೋಧಕವೃಂದವು ಮುಕ್ತವಾಗಿರುವವುದರೊಂದಿಗೆ ಆ ಬಗ್ಗೆ ಸ್ಥಿರೀಕರಣವೂ ಕೂಡ ಕೇವಲ ಸ್ಥೂಲವಾಗಿ

(ಸಾರಾಂಶರೂಪದಲ್ಲಿ) ಇರಬೇಕು. ಕನಿಷ್ಠ ಗುಣಮಟ್ಟವನ್ನು ನಿಭಾಯಿಸುವುದಾದರೆ ಪಠ್ಯಕೋರ್ಸ್‌ಗಳ ಕಾಲಾವಧಿಯನ್ನು ಕೂಡಾ ನಮನಶೀಲ ಪ್ರಕಾರ್ಯವಾಗಿರಸಬಹುದು. ಯುಜಿಸಿ ಮತ್ತು ಎಐಸಿಟಿಇ ಯಂಥ ನಿಯಂತ್ರಕ ನಿಕಾಯಗಳು ಪಠ್ಯಕ್ರಮದ ವಿಷಯಗಳಲ್ಲಿ ಬೋಧಕವೃಂದ ಮತ್ತು ಸಾಂಸ್ಥಿಕ ಸಾತಂತ್ರ್ಯಕ್ಕೆ ಗೌರವ ನೀಡಬೇಕು. ವಿಶ್ವದಾದ್ಯಂತ ಇರುವ ಅತ್ಯುತ್ತಮ ಪದ್ಧತಿಗಳಿಂದ ಈ ನಿಯಂತ್ರಕ ನಿಕಾಯಗಳು ಕಲಿತುಕೊಳ್ಳಬೇಕಾದ ಅಂಶಗಳಿವೆ.

ಕೌಶಲ್ಯಗಳನ್ನು ಮುಖ್ಯವಾಹಿನಿಯಲ್ಲಿ ತರುವುದಕ್ಕೆ ಶಾಲಾ ಶಿಕ್ಷಣ ಪದ್ಧತಿಯೊಂದಿಗೆ ತೊಡಗಿಸಿಕೊಳ್ಳುವುದು ಮತ್ತು ಅಂಥ ಕೌಶಲ್ಯಗಳನ್ನು ಹೊಂದಿರುವವರೊಂದಿಗೆ ನೇರವಾದ ಸಂಪರ್ಕ ಹೊಂದಲು ಸೇತುವೆಯಾಗಬಹುದಾದ ಸಮುದಾಯ ಕಾಲೇಜುಗಳನ್ನು ಸ್ಥಾಪಿಸುವುದು ಅವಶ್ಯ. ಕೌಶಲ್ಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವುದರಿಂದ ಪಿಎಚ್‌ಡಿ ಪಡೆದ (ಕೊಳಾಯಿ ಕೆಲಸದ) ಪ್ಲಂಬರ್ ಮತ್ತು ಬಡಗಿ (ಕಾರ್ಪೆಂಟರ್) ಗಳು ಮುಂದೆ ಬರಲು ಉತ್ತೇಜಿಸಿದಂತಾಗುತ್ತದೆ. ಭಾರತ ಕೇವಲ ಉನ್ನತಶಿಕ್ಷಣದ (ವೈಟ್‌ಕಾಲರ್ ಥರ್ಸ್ಟ್) ಹಪಹಪಿಕೆಯ ಆಚೆಗೂ ಕೌಶಲ್ಯಗಳನ್ನು ಗೌರವಿಸುವ ಹಾಗೂ ಕಲಿಕೆಯ ಕಲ್ಪನೆಯನ್ನು ಅಭಿವೃದ್ಧಿಪಡಿಸುವುದು ಅವಶ್ಯವಾಗಿದೆ. ತಮಿಳುನಾಡಿನ ಬೋಧಕವೃಂದದ ವಿವರಗಳು ಅದರ ಬೆಳವಣಿಗೆ ಬಗ್ಗೆ ಅತ್ಯಂತ ಆಸಕ್ತಿದಾಯಕ ಒಳನೋಟ ನೀಡುತ್ತದೆ. ಕೇವಲ ಇದೊಂದು ರಾಜ್ಯದಲ್ಲಿ ಮಾತ್ರವೇ ವೃತ್ತಿಪರ ಕೌಶಲ್ಯಗಳನ್ನು ಒದಗಿಸುವ (ಬೋಧನಾಶಿಕ್ಷಣ, ಅರೆವೈದ್ಯಕೀಯ, ವೈದ್ಯಕೀಯ, ನರ್ಸಿಂಗ್ ಇತ್ಯಾದಿ) ಸಂಸ್ಥೆಗಳು ಸಾಮಾನ್ಯ ಬಿಎ, ಬಿ.ಕಾಮ್, ಬಿ.ಎಸ್‌ಸಿ ಕೋರ್ಸ್‌ಗಳನ್ನು ಅಭ್ಯಸಿಸುವುಕ್ಕೆ ಬದಲಾಗಿ ಸೃಷ್ಟಿಗೊಂಡಿವೆ. ಕೌಶಲ್ಯಾಧರಿತ ವಿಸ್ತರಣೆ ಹಾಗೂ ಶ್ರೇಷ್ಠತೆಯು ಜನಾಂಗಾಧಾರಿತ ಪರಿಣಾಮಗಳನ್ನು ಪಡೆಯಲು ಅತಿಮುಖ್ಯವಾಗಿರುವ ನಮ್ಮ ಮಧ್ಯಭಾರತ ಪ್ರದೇಶಗಳಲ್ಲಿ ಇದು ಅತ್ಯಗತ್ಯವಾಗಿದೆ. ಪ್ರೌಢಶಿಕ್ಷಣ ಕ್ಷೇತ್ರದಲ್ಲಿ ಕೌಶಲ್ಯಗಳು ಕೇವಲ ಭಾರತವನ್ನು ಬೆಳೆಸುವುದಕ್ಕೆ ಮಾತ್ರವಲ್ಲ. ಅದು ಸೇವಾವಲಯ, ಶಿಕ್ಷಕರು, ಆರೋಗ್ಯಕಾರ್ಯಕರ್ತರು, ನರ್ಸ್ ಮುಂತಾದವರ ಅವಶ್ಯಕತೆಗಳಿಗೂ ಕೂಡ ಅನ್ವಯಿಸುತ್ತದೆ.

ಅಸಂಖ್ಯಾತ ಶ್ರೇಷ್ಠ ಸಾರ್ವತ್ರಿಕ ಸಂಸ್ಥೆಗಳಿದ್ದು, ಅವುಗಳ ನಮೂನೆಯಲ್ಲಿ, ನವ ಕ್ಯಾಂಪಸ್‌ಗಳನ್ನು ಸೃಜಿಸುವುದು, ರಾಜ್ಯಗಳಲ್ಲಿ ಮತ್ತು ವಿದೇಶಗಳಲ್ಲಿ ಬೇಡಿಕೆ ಆಧಾರಿತ ವಿಸ್ತರಣೆ ಸಾರ್ವಜನಿಕ ಬಂಡವಾಳ ಹೂಡಿಕೆಯೂ ಕೂಡ ಏರಲೇಬೇಕಾಗಿದ್ದು, ಶ್ರೇಷ್ಠತೆಯ ಮಂತ್ರವನ್ನು ಮುನ್ನಡೆಗೊಯ್ಯಲು ಇದು ಸಾಕಷ್ಟು ನೆರವಾಗುತ್ತದೆ. ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಅನುವಾಗುತ್ತಿರುವಾಗ ನಾವು ಶ್ರೀರಾಮ್ ಕಾಲೇಜ್ ಆಫ್ ಕಾಮರ್ಸ್, ಲೇಡಿ ಶ್ರೀರಾಮ್‌ಕಾಲೇಜ್, ಸ್ಯೆಂಟ್ ಸ್ಟೀಫನ್ಸ್ ಕಾಲೇಜ್, ಟಾಟಾ ಇನ್ಸ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ಸ್, ಎಐಐಎಂಎಸ್, ಐಐಟಿ ಗಳು, ಎನ್‌ಐಟಿಗಳು, ಐಐಎಂ ಗಳು ಮುಂತಾದವುಗಳಂಥ ಸಂಸ್ಥೆಗಳಿಗೂ ಕೂಡ ಹಲವಾರು ರಾಜ್ಯಗಳಲ್ಲಿ ಅವುಗಳ ಶಾಖೆಗಳನ್ನು ಸ್ಥಾಪಿಸಲು ಪ್ರೋತ್ಸಾಹ ನೀಡಬೇಕಾಗುತ್ತದೆ. ಅದೇರೀತಿ, ರಾಜ್ಯವಲಯದಲ್ಲಿ ಸಾರ್ವತ್ರಿಕ ವಿಶ್ವವಿದ್ಯಾಲಯಗಳನ್ನು ಪುನಶ್ಚೇತನಗೊಳಿಸಲು ಭೌತಿಕ ಮೂಲ ಸೌಕರ್ಯ, ಬೋಧಕವೃಂದ, ಆಡಳಿತಾತ್ಮಕ ಕೊರತೆಗಳು ಇವುಗಳಲ್ಲಿನ ಅಂತರಗಳನ್ನು ನಿವಾರಿಸಲು ಸಾರ್ವಜನಿಕ ಬಂಡವಾಳ ಹೂಡಿಕೆ ಮಾಡಲೇಬೇಕಾಗುತ್ತದೆ. ಪಾರದರ್ಶಕ ಹಾಗೂ ಸಕ್ಷಮವಾದ ಶೋಧನಾ ಸಮಿತಿ ಪದ್ಧತಿಯ ಮೂಲಕ ಉಪಕುಲಪತಿಗಳು ಮತ್ತು

ಪ್ರಾಂಶುಪಾಲರಂಥ ಶೈಕ್ಷಣಿಕ ನಾಯಕರನ್ನು ಆಯ್ಕೆ ಮಾಡುವಲ್ಲಿ ಭ್ರಷ್ಟಾಚಾರಕ್ಕೆ ಕವಡೇಕಾಸಿನಷ್ಟು ಅವಕಾಶ ನೀಡದಂಥ ಕ್ರಮದಿಂದ ಹಿಂದೆಗೆಯಬಾರದು. ನಾಕಕತ್ವದಲ್ಲಿ ಇರುವವರ ಶ್ರೇಷ್ಠತೆ, ನಿಷ್ಠೆ ಹಾಗೂ ಶೈಕ್ಷಣಿಕ ಕೊಡುಗೆಗಳನ್ನು ವ್ಯಾಪಕವಾಗಿ ಗುರುತಿಸಿದರೆ, ಅವರು ಈ ವಿಷಯದಲ್ಲಿ ಬದಲಾವಣೆಯನ್ನು ತರಲು ಸಮರ್ಥರಾಗುತ್ತಾರೆ.. ವ್ಯಕ್ತಿಗಳನ್ನು ವೈಯಕ್ತಿಕವಾಗಿ ಪರಿಗಣಿಸುವ ಅಗತ್ಯವಿದೆ. ರಾಜ್ಯವಿಶ್ವವಿದ್ಯಾಲಯಗಳಿಗೆ ಹಣಕಾಸು ನೆರವು ಒದಗಿಸುವಾಗ ಆಡಳಿತಾತ್ಮಕ ಕುಂದು ಕೊರತೆಗಳನ್ನು ನಿವಾರಿಸಲೇಬೇಕಾದ ಅವಶ್ಯಕತೆಗಳ ಬಗ್ಗೆ ಲಕ್ಷ್ಯವಹಿಸಬೇಕು. ಕೇಂದ್ರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು (ಐಐಟಿಗಳು, ಎಐಎಎಂಎಸ್, ಇತ್ಯಾದಿ) ಹಾಗೂ ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳ ನಡುವೆ ವ್ಯವಸ್ಥಿತ ಸಾಮರಸ್ಯದ ಸಂಬಂಧವಿರುವಂತೆ ಪ್ರಯತ್ನಿಸಬೇಕು. ಕೇಂದ್ರೀಯ ಸಂಸ್ಥೆಗಳು ಕಾರ್ಯಗತಿಯನ್ನು ನಿರ್ದೇಶಿಸುವಂಥ ಪಾತ್ರವಹಿಸಬೇಕಲ್ಲದೆ ಅವುರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಂದಿಗೆ ವ್ಯವಸ್ಥಿತವಾಗಿ ಸಂಪರ್ಕ ಹೊಂದಿರತಕ್ಕದ್ದು. ರಾಜ್ಯ ವಿಶ್ವವಿದ್ಯಾಲಯಗಳಿಗೆ ಭೂಮಿಯ ಸಂಪನ್ಮೂಲಗಳು ಲಭ್ಯವಿರುತ್ತಿದ್ದು, ವಾಸ್ತವವಾಗಿ ಅದು ಅತ್ಯಂತ ದೊಡ್ಡ ಸಂಪನ್ಮೂಲವಾಗಿರುತ್ತದೆ. ಇದರೊಂದಿಗೆ ಸಾಂಸ್ಥಿಕ ಆಡಳಿತಾತ್ಮಕ ಸುಧಾರಣೆಗಳನ್ನು ಒಳಗೊಂಡಿತೆಂದರೆ, ರಾಜ್ಯ ವಿಶ್ವವಿದ್ಯಾಲಯಗಳು ಮೂಲ ಸೌಕರ್ಯ, ಮಾನವ ಸಂಪನ್ಮೂಲ, ಸಲಕರಣೆಗಳಲ್ಲಿ ಸಾಕಷ್ಟು ಬಂಡವಾಳ ಹೂಡಿಕೆ ಮಾಡಿದ್ದಲ್ಲಿ, ಆಡಳಿತವರ್ಗದ ಸಹಾಯದೊಂದಿಗೆ ಅವುಗಳನ್ನು ಅತ್ಯಂತ ಶ್ರೇಷ್ಠಮಟ್ಟದ ಕಲಿಕಾ ಕೇಂದ್ರಗಳಾಗಿ ಮಾರ್ಪಡಿಸಲು ಸಾಧ್ಯ.

ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವ ಪ್ರಕ್ರಿಯೆಗಳನ್ನು ಇನ್ನಷ್ಟು ಸರಳೀಕರಿಸುವ ನಿಟ್ಟಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ಆಡಳಿತರಚನಾ ವ್ಯವಸ್ಥೆಯನ್ನು ಬದಲಾಯಿಸಬೇಕಾಗಿದ್ದು, ಎಂದರೆ ಕಡ್ಡಾಯವಾಗಿ ಲಾಭಕ್ಕಾಗಿ ನೊಂದಾಯಿತವಾಗದ ಸಹಕಾರ ಸಂಘದಿಂದ ಶೈಕ್ಷಣಿಕ ವಲಯಕ್ಕಾಗಿ ಲಾಭಗಳನ್ನು ಮರುಬಂಡವಾಳ ಹೂಡಿಕೆಮಾಡುವಂಥ ಉಪಬಂಧದೊಂದಿಗೆ ಕಂಪನಿಗಳ ಅಧಿನಿಯಮದ ಮೇರೆಗೆ ನೊಂದಾಯಿತವಾದ ಸಂಸ್ಥೆಗಳನ್ನಾಗಿ ಮಾರ್ಪಡಿಸಬೇಕು. ಈ ಬಗ್ಗೆ ಉನ್ನಿಕೃಷ್ಣನ್ ಪ್ರಕರಣದಲ್ಲಿ ನಿರ್ಧರಿಸಲಾದಂಥ ವಿವಾದಾಂಶಗಳಿಗೆ ಉತ್ತರ ನೀಡಬಲ್ಲ ಹೊಸಶಾಸನವನ್ನು ತರುವ ಅಗತ್ಯವಾಗುತ್ತದೆ. ಶಾಲೆಗಳು ಮತ್ತು ಕಾಲೇಜುಗಳನ್ನು ಅತಿ ಹೆಚ್ಚು ಕಂತುಗಳಲ್ಲಿ ಕೊಳ್ಳುವುದು ಮತ್ತು ಮಾರಾಟ ಮಾಡಲಾಗುತ್ತದೆ. ಆದರೆ ದುರದೃಷ್ಟವಶಾತ್, ಅವು ಯಾವುವೂ ಕೂಡ ಹೆಚ್ಚುವರಿ ಇಳುವರಿಕೊಡಬಹುದಾದಂಥ ಲಾಭ ತರದ ನೊಂದಾಯಿತ ಸಂಸ್ಥೆಗಳಾಗಿವೆ. ಇದರಿಂದ ಲೆಕ್ಕಾಪತ್ರಗಳಲ್ಲಿ ಅಸಂಬದ್ಧತೆಯುಂಟಾಗುತ್ತದೆ. ಅಲ್ಲದೆ, ಶೈಕ್ಷಣಿಕ ಸಂಸ್ಥೆಗಳು ಲಾಭ ತರದ ಚೌಕಟ್ಟಿನ ಆಧಾರದ ಮೇಲೆ ಸ್ಥಾಪಿತವಾಗುವುದರಿಂದ ಬ್ಯಾಂಕುಗಳು ಕೂಡ ಅವುಗಳನ್ನು ಸ್ಥಾಪಿಸಲು ಹಣದ ಸಾಲ ನೀಡುವುದಿಲ್ಲ. ಇದರಿಂದ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಣವಿನಿಯೋಗಿಸುವವರು ತಮ್ಮ ಸ್ವಂತ/ಕಂಪನಿಯ ಹೆಚ್ಚುವರಿ (ಅಜೀಂ ಪ್ರೇಮ್‌ಜಿ, ಶಿವನಾಹಾಲ್) ನಿಧಿಗಳನ್ನು ಹೂಡಿಕೆ ಮಾಡಬೇಕು ಅಥವಾ ದಾನಗಳ ರೂಪದಲ್ಲಿ ನಿಧಿಯ ವ್ಯವಸ್ಥೆ ಮಾಡಬೇಕಾಗುತ್ತದೆ. ಹೀಗಾಗಿ ಶೈಕ್ಷಣಿಕ ವಿಸ್ತರಣೆ ಬ್ಯಾಂಕುಗಳಿಗೆ ನಿಧಿಸಂದಾಯವಾಗುವುದಿಲ್ಲವಾದ್ದರಿಂದ, ತೆರಿಗೆ ತಪ್ಪಿಸಿದ ತಲೆ ಶುಲ್ಕ ಹಣ, ಕಪ್ಪುಧನ ಮತ್ತು ಭ್ರಷ್ಟಾಚಾರದಿಂದ ಸಂಪಾದಿಸಿದ ಉಳಿತಾಯಗಳನ್ನು ಬಂಡವಾಳ ಹೂಡಿಕೆ ಮಾಡುವಂಥ ಪರಿಸ್ಥಿತಿಯುಂಟಾಗುತ್ತದೆ. ಆದ್ದರಿಂದ ಶೈಕ್ಷಣಿಕ ಉದ್ಯಮಿಗಳಿಗೆ

ಪ್ರೋತ್ಸಾಹನೀಡುವ ವಿಧಾನವನ್ನು ಕಂಪನಿಗಳ ಅಧಿನಿಯಮದ ಮೇರೆಗೆ ಶೈಕ್ಷಣಿಕ ಸಂಸ್ಥೆಗಳನ್ನು ನೋಂದಾಯಿಸಲು ಅನುಮತಿ ನೀಡುವಂತೆ ಬದಲಾಯಿಸಬೇಕು. ಇದರಿಂದ, ಅವರು ವಾಸ್ತವವಾಗಿಯೂ ಲಾಭಗಳಿಸಬಹುದಲ್ಲದೆ ಬ್ಯಾಂಕಿಂಗ್ ಸಂಸ್ಥೆಗಳಿಗೂ ಕೂಡ ಆರ್ಥಿಕವಾಗಿ ಕಾರ್ಯಸಾಧ್ಯವೆನಿಸಬಹುದಾಗಿರುತ್ತದೆ. ಹೀಗಾಗಿ ನಮಗೀಗ ಶ್ರೇಷ್ಠ ಸಂಸ್ಥೆಗಳನ್ನು ನಿರ್ಮಿಸಬಹುದಾದಂಥ ಶೈಕ್ಷಣಿಕ ಉದ್ಯಮಿಗಳ ಅಗತ್ಯ ಇದೆ. ಇವರಲ್ಲಿ ಹೆಚ್ಚು ಹೆಚ್ಚು ವರ್ಷಗಳವರೆಗೂ, ಗಳಿಸಬಹುದಾದ ಲಾಭಗಳನ್ನು ಮತ್ತೆ ಶೈಕ್ಷಣಿಕ ವಲಯದಲ್ಲಿಯೇ ಹೂಡುವಳಿ ಮಾಡಲು ಸೂಚಿಸಬಹುದು.

ಯುವ ಜನಾಂಗದ ಬಹಳಷ್ಟು ಜನರು ನಿರುದ್ಯೋಗಿಗಳು, ಅರ್ಹತೆಗಿಂತ ಕಡಿಮೆ ಮಟ್ಟದ ಉದ್ಯೋಗಿಗಳು ಅಥವಾ ಕೆಳಗಿನ ಮಟ್ಟದ ಕೌಶಲ್ಯ ಹಾಗೂ ಕಾರ್ಯಕ್ಷಮತೆಯ ಉದೋಗಗಳಲ್ಲಿ ಇರುವುದರಿಂದ ಕೌಶಲ್ಯಗಳನ್ನು ಮತ್ತು ಶಾಲಾ ಶಿಕ್ಷಣದ ಪೂರ್ಣವಾಗುವಾಗಜೀವನಾಧಾರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ನಮ್ಮ ಮುಂದಿರುವ ಅತಿ ದೊಡ್ಡ ಸವಾಲಾಗಿದೆ. ಇದನ್ನು ಪರಿಹರಿಸಲು ಸಾಧ್ಯವಾದಷ್ಟು ನಮನಶೀಲವಾದ ಉದ್ಯೋಗಾವಕಾಶಗಳನ್ನು ಖಾಸಗಿ ಅಥವಾ ಸಾರ್ವಜನಿಕ ವ್ಯವಸ್ಥೆಯಲ್ಲಿ ಕಲ್ಪಿಸಿ ಅವರು ಕೌಶಲ್ಯಗಳನ್ನು ಗಳಿಸಲು ಮತ್ತು ಅವುಗಳನ್ನು ಪರೀಕ್ಷಿಸಲು ಹಾಗೂ ಅರ್ಹತಾ ಪತ್ರಗಳನ್ನು ನೀಡಲು ಪ್ರಯತ್ನಿಸಬೇಕು. ಅವುಗಳನ್ನು ಉದ್ಯಮ ಅಥವಾ ಸೇವಾ ವಲಯವು ಉದ್ಯೋಗನೀಡುವ ಉದ್ದೇಶಗಳಿಗಾಗಿ ಗುರುತಿಸಿ ಬಳಸಬಹುದು. ಮೇಲ್ಕಂಡಂತೆ ಇವೇ ತತ್ವಗಳ ಆಧಾರದ ಮೇಲೆ ಸುಸಂಬದ್ಧವಾಗಿ ರೂಪಿಸಲಾದ ಸ್ವಾಯತ್ತ ಸಂಸ್ಥೆಗಳ ಚೌಕಟ್ಟನ್ನು ವೃತ್ತಿ ತರಬೇತಿ ನೀಡುವವರಿಗೆ, ಪಠ್ಯಕ್ರಮವನ್ನು ರೂಪಿಸಲು, ಕೌಶಲ್ಯಗಳು ಮತ್ತು ಸಕ್ಷಮತೆಯನ್ನು ನಿರ್ಧಾರಣೆ ಮಾಡಲು ಪರೀಕ್ಷೆ ನಡೆಸುವುದಕ್ಕಾಗಿ ಸ್ಥಾಪಿಸುವುದು ಅಗತ್ಯವಿದ್ದು, ಇದರಿಂದ ಉದ್ಯಮ ಹಾಗೂ ವ್ಯಾಪಾರದ ಮುಖಾಮುಖಿಯಾಗುವುದು, ಮಾನವಬಲ ಯೋಜನೆ ಹಾಗೂ ಮುಂಗಾಣಿಕೆಗಳಲ್ಲಿ ತೊಡಗುವುದು, ವಿವಿಧ ಕೌಶಲ್ಯ ಮುಂತಾದವುಗಳಲ್ಲಿ ಕೂಡಭಾಗವಹಿಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ಅತ್ಯಂತ ಶಕ್ತಿಶಾಲಿ ಸಂಸ್ಥೆಗಳನ್ನು ಬೆಳೆಸುವುದು ಭಾರತದ ಅತಿದೊಡ್ಡ ಸವಾಲಾಗಿದೆ.

ಉತ್ತಮ ರಾಷ್ಟ್ರೀಯ ಶೈಕ್ಷಣಿಕ ಸಂಸ್ಥೆಗಳಿಗೆ ಅವು ಪ್ರಾಂತೀಯ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಏರ್ಪಾಟುಗಳನ್ನು ಹಾಗೂ ಪಾಲುದಾರಿಕೆಗಳನ್ನು ಹೆಣೆದುಕೊಂಡು, ನೆರವು ಹಾಗೂ ಬೆಂಬಲ ನೀಡಲು, ಸಾಮರ್ಥ್ಯ ಹಾಗೂ ವೃತ್ತಿಪರತೆಯನ್ನು ನಿರ್ಮಿಸಲು ಪ್ರೋತ್ಸಾಹ ನೀಡಬೇಕು. ಅದೇ ರೀತಿ, ವಿದೇಶೀ ವಿಶ್ವವಿದ್ಯಾಲಯಗಳೊಂದಿಗೆ ಕೂಡ ಎಂದರೆ ಜಾಗತಿಕವಾಗಿ ಪ್ರಸಿದ್ಧಿ ಹೊಂದಿರುವ ಸಂಸ್ಥೆಯೊಂದಿಗೆ ಸಹಯೋಗ ಹೊಂದಿ, ರಾಷ್ಟ್ರೀಯ ಸಂಸ್ಥೆ ಮತ್ತು ಬೋಧನಾ ವೃಂದದ ಸಬಲವಾದ ಚೌಕಟ್ಟಿನ ರುಜುವಾತನ್ನು ಆಧರಿಸಿ ಪಾಲುದಾರಿಕೆ ಮಾಡಬಹುದು. ಇದರ ಜೊತೆಗೆ, ಈ ಜಾಗತಿಕ ಸಂಸ್ಥೆಗಳಿಂದ ಉತ್ತಮ ಬೋಧಕವರ್ಗವನ್ನು ಹೊಂದುವ ಬಗ್ಗೆ ಒತ್ತು ನೀಡಬೇಕು. ಇಲ್ಲದಿದ್ದರೆ, ಪಾಲುದಾರಿಕೆಯ ಮೌಲ್ಯ ಅತಿಕಡಿಮೆಯಾಗುತ್ತದೆ. ವಿಶ್ವವಿದ್ಯಾಲಯಗಳ ವಿನಿಮಯಗಳ ವಿನ್ಯಾಸವು (ರೂಪರಚನೆ) ಶ್ರೇಷ್ಠತೆ ಹಾಗೂ ಸಮಾನತೆಗೂಡಿದ ವಿಸ್ತರಣೆಗೆ

ಅನುವಾಗುವಂಥ ಆವಿಷ್ಕಾರಗಳನ್ನು ಆಧರಿಸಿ ಇನ್ನೂ ಶ್ರೇಷ್ಠತೆಗೆ ಪುರಾವೆಯಾಗಬಲ್ಲ ರೀತಿಯಲ್ಲಿ ಸುಧಾರಣೆ ತರಬೇಕು.

ಬೋಧನಾ ವೃತ್ತಿಯಲ್ಲಿ ಉತ್ತಮ ಮಾನವ ಸಂಪನ್ಮೂಲವನ್ನು ಉಳಿಸಿಕೊಳ್ಳುವ ಮಾರ್ಗಗಳ ಮೂಲಕ ನಾವು ಚಿಂತನೆ ನಡೆಸಬೇಕಾದ ಸಮಯ ಬಂದಿದೆ. ನಾವು ಪುರಾವೆಗಳನ್ನು ಅವಲೋಕಿಸಿ ಅತ್ಯಂತ ಕುಶಾಗ್ರಮತಿಗಳು ಮತ್ತೆ ಬೋಧನಾ ವೃತ್ತಿಗೆ ಮರಳುವಂತೆ ಮಾಡುವ ಚೌಕಟ್ಟುಗಳನ್ನು ರೂಪಿಸಬೇಕಾಗಿದೆ. ಗುಣಮಟ್ಟದ ಬಗ್ಗೆ ಯಾವುದೇ **ಚೌಕಾಸಿ ಮಾಡದೆ** ಅಪ್ರಧಾನರಾದ ಬೋಧಕರ (ಚಿಜರಿಣಟಿಥಿಣ ಜಿಚಿಛಿಟಿಣೂಥಿ) ಅರ್ಹತಾ ಷರತ್ತುಗಳನ್ನು ಸಡಿಲಗೊಳಿಸಿದಲ್ಲಿ ಉದ್ಯಮದಿಂದ ಬೋಧನಾ ವೃತ್ತಿಗೆ ಹಾಗೂ ಬೋಧನೆಯಿಂದ ಉದ್ಯಮದೆಡೆಗೆ ಆಂತರಿಕ ಬದಲಾವಣೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ತಮಿಳುನಾಡು ಇದನ್ನು ಅದರ ಸಾರ್ವಜನಿಕ ಆರೋಗ್ಯ ಪ್ರವರ್ಗದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಸಾಧಿಸಿದೆ. ಜೊತೆಗೆ, ಹೆಚ್ಚು ವೇತನಗಳು, ವಸತಿ ಸೌಕರ್ಯ, ಉತ್ತಮ ಪರಿಸರ, ಸಂಶೋಧನೆಗೆ ಬೆಂಬಲ ನೀಡುವುದು ಇವೆಲ್ಲದರಿಂದ ವ್ಯಕ್ತಿಗಳು 'ಶೈಕ್ಷಣಿಕ ವಿರುದ್ಧದಿಂದ'(ಖಜಾಜಾಿಜ ಚಿಛಚಿಣಛಿಚಿಟ) ಶೈಕ್ಷಣಿಕ ಸಂಸ್ಥೆಗಳತ್ತ ಮತ್ತೆ ಆಕರ್ಷಿತರಾಗಲು ಉತ್ತೇಜನೆ ದೊರೆಯುತ್ತದೆ.ಅಪ್ರಧಾನ ಬೋಧನಾ ವೃಂದವು ಉದ್ಯಮ-ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರಾಧಾನ್ಯತೆ ನೀಡುವುದರಿಂದ **ಅಂತರ್ ವಿಷಯ** ಚಿಂತನಾ ಪ್ರಕ್ರಿಯೆ (ಖಟಿಣಜಾ-ಜುಛಿಟಿಟಟಿಚಿಡಿಥಿ) ಸೃಜನೆಯಾಗಲು ಪ್ರೇರಿಸುವುದರಿಂದ ಅದಕ್ಕೆ ಪ್ರೋತ್ಸಾಹ ನೀಡಲೇಬೇಕಾಗುತ್ತದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಅಭ್ಯಾಸಿಯ ಒಳಚಿಂತನೆಗಳಿಗೆ ಅತ್ಯಂತ ಮಹತ್ತ್ವವಿದೆ. ಅಷ್ಟೇ ಅಲ್ಲ ಯಾವುದೋ ಸಂಬಂಧ ಸಂಪರ್ಕಗಳ ಮೂಲಕ ಅರ್ಹತೆ ಇಲ್ಲದೆ ಹಣ ನೀಡಿ ಒಳನುಸುಳಿರುವ ಅಸಮರ್ಥರನ್ನು ಹೊರಹಾಕಬೇಕಾದ ತುರ್ತುಸ್ಥಿತಿಯೂ ಉದ್ಭವಿಸಿದೆ. ಸತ್ತ ಮರವನ್ನು ಹೊರಗೆಸೆಯುವಂತೆ ಸರ್ಕಾರಿ ವ್ಯವಸ್ಥೆಯಲ್ಲಿ ಸರ್ಕಾರಿ ನೇಮಕಾತಿ ಮತ್ತು ಸೇವಾಷರತ್ತುಗಳಲ್ಲಿ ಇಂಥ ಅತಿಮುಖ್ಯ ಸುಧಾರಣೆಯನ್ನು ತರುವ ಅವಶ್ಯಕತೆಯಿದೆ. ಈ ಬಗ್ಗೆ ಹೊಸ ಕಾನೂನುಗಳನ್ನು ರೂಪಿಸುವುದು ಅವಶ್ಯವಾಗಿದ್ದು, ಇಲ್ಲದಿದ್ದರೆ ನಿದರ್ಶನಾತ್ಮಕ ಕಾನೂನುಗಳಲ್ಲಿ (ಥಿಚೆಜ ಟಚಿತಿ) ಸೂಚಿಸಿರುವ ಸೇವಾಭದ್ರತೆಯ ಉಪಬಂಧಗಳ ಮೊರೆಹೋಗುತ್ತಾರೆ. ಮುಕ್ತವಾಗಿ ಕಾರ್ಯನಿರ್ವಹಣೆ ಮಾಡದೆಯೇ ಸರ್ಕಾರದ ಬೊಕ್ಕಸದಿಂದ ಹಣ ಹೊಡೆಯುವ ವ್ಯಕ್ತಿಗಳ ಹಕ್ಕುಗಳ ಬಗ್ಗೆ ನಾವೀಗ ಗಮನಹರಿಸಬೇಕಾಗಿದೆ. ನಾವು ಇದನ್ನು ಹೀಗೆಯೇ ಬಿಟ್ಟರೆ ಸಮಾಜದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಶೈಕ್ಷಣಿಕ ಸುಧಾರಣೆಗಳ ಮೂಲಕ ಭಾರತವನ್ನು ಪರಿವರ್ತಿಸಲು ನಾವು ಬಯಸುವುದಾದರೆ, ಬೆನ್ನಿಗೆ ಚೂರಿ ಚುಚ್ಚುವುದರ ಬಗ್ಗೆ ಆಡಳಿತ ನಿಷ್ಕ್ರಿಯತೆಯನ್ನು ಹೇಳುವುದು ಬೇಡ. ಅಂಥವರು ಸರ್ಕಾರೀ ವ್ಯವಸ್ಥೆಗಳಲ್ಲಿ, ತಮ್ಮ ಒಗ್ಗೂಡಿಸಿಕೊಂಡಿರುವ ಅಸಮರ್ಥತೆ ಮತ್ತು ತಮ್ಮ ಬೆಳವಣಿಗೆಯ ವೈಫಲ್ಯದ ಮೂಲಕ ಒಳಗೆ ಸೇರಿಹೋಗಿದ್ದಾರೆ. ಉನ್ನತವಾದ ಸರ್ಕಾರಿ ವ್ಯವಸ್ಥೆಯನ್ನು ನಾವು ರೂಪಿಸಬೇಕಾಗಿದ್ದು, ಇದಕ್ಕಾಗಿ, ಸರ್ಕಾರಿ ನೇಮಕಾತಿಗಳು ಮತ್ತು ಸರ್ಕಾರಿ ಆಡಳಿತ ವ್ಯವಸ್ಥೆಯ ಸುಧಾರಣೆಗಾಗಿ ನಾವು ಪುರಾವೆಗಳ ಸಹಿತ ಪ್ರಯತ್ನಿಸಬೇಕಾಗಿದೆ.

ಭಾರತವನ್ನು ಪರಿವರ್ತಿಸಲು ಮತ್ತು ಅಪಾರವಾದ ಯುವಜನಾಂಗವನ್ನು ಏರಿಕೆಯಹಾದಿಯಲ್ಲಿ ಬದಲಾಯಿಸಲು ಶೈಕ್ಷಣಿಕ ಸುಧಾರಣೆ ಅತ್ಯಂತ ಸಮರ್ಥವಾದ ಸಾಧನವಾಗಿದೆ. ಸಾರ್ವಜನಿಕ ವೆಚ್ಚವನ್ನು ಜಿಡಿಪಿ ಯಲ್ಲಿ ಶೇ. 6 ರಷ್ಟು ಏರಿಕೆ ಮಾಡುವ ಬದ್ಧತೆಯೊಂದಿಗೆ ಮತ್ತು ಭಾರಿಪ್ರಮಾಣದ ಖಾಸಗಿ ವಲಯದ ಬಂಡವಾಳ ಹೂಡಿಕೆಗಳನ್ನು ಇನ್ನಷ್ಟು ಶ್ರೇಷ್ಠತೆ ಹಾಗೂ ಸಮಾನವಾಗಿ ಮಾಡುವ ಮೂಲಕ, ಭಾರತವು ಹತ್ತುವರ್ಷಗಳ

ಕಾಲಮಿತಿಯಲ್ಲಿ ಚೀನಾದೇಶದ ಶೈಕ್ಷಣಿಕ ವಿಸ್ತರಣೆಯನ್ನು ಹಿಂದಿಕ್ಕಬಹುದು. ಯುವಭಾರತಕ್ಕೆ ಇದು ಅತ್ಯುತ್ತಮ ಅವಕಾಶವಾಗಿದೆ. ಪ್ರಪಂಚಕ್ಕೆ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಶ್ರಮಿಕಬಲ (ತಿಡಿಇಜಿಡಿಛಿಜ) ವನ್ನು ಒದಗಿಸಬಲ್ಲಂಥ ಭಾರತ ನಮ್ಮದಾಗುತ್ತದೆ. ನಿರಂತರ ಆರ್ಥಿಕ ಬೆಳವಣಿಗೆಯ ಉನ್ನತ ದರಗಳು ಹಾಗೂ ವ್ಯಕ್ತಿಗಳ ಉತ್ತಮ ನಡವಳಿಕೆಯು ಶಿಕ್ಷಣವನ್ನು ರಾಷ್ಟ್ರೀಯ ಪರಿವರ್ತನೆಗಾಗಿ ಬಳಸಿಕೊಳ್ಳಲು ನಮಗಿರುವ ನಿರ್ಣಾಯಕ ಸಾಧನವಾಗಿದೆ.

ಅಮರ್‌ಜಿತ್ ಅವರು ಮಾನವಾಭಿವೃದ್ಧಿಯಲ್ಲಿ ಆಳವಾದ ಆಸಕ್ತಿ ಹೊಂದಿರುವ ಸರ್ಕಾರಿ ಅಧಿಕಾರಿಯಾಗಿದ್ದಾರೆ. ಅವರು ಸರ್ವಶಿಕ್ಷಣ ಅಭಿಯಾನ ಮತ್ತು ನ್ಯಾಷನಲ್ ರೂರಲ್ ಹೆಲ್ತ್ ಮಿಷನ್ನನ್ನು ರೂಪಿಸಿದ ತಂಡದ ಸದಸ್ಯರಾಗಿದ್ದರು. ಭಾರತದ ಒಟ್ಟಾರೆ 643 ಜಿಲ್ಲೆಗಳ ಪೈಕಿ 576 ಜಿಲ್ಲೆಗಳಿಗೆ ಅವರು ಭೇಟಿ ನೀಡಿದ್ದಾರಲ್ಲದೆ ಸುಮಾರು 15 ವರ್ಷಗಳ ಕಾಲ ಭಾರತೀಯ ಆಡಳಿತ ಸೇವೆಗಳ (ಐಎಎಸ್) ತರಬೇತಿದಾರರಿಗೆ ಸಾಮಾಜಿಕ ವಲಯ (ಡಿಥಿಜಣಟಜ) ಮಾನಕ ಪ್ರಮಾಣಗಳನ್ನು ನಡೆಸಿದ್ದಾರೆ.

ಅನುವಾದ ಡಾ. ವೈ.ಎಸ್. ಜ್ಯೋತಿಶಶಿಕುಮಾರ್